ಇಂದು ದಿಃ **03.02.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ ಐ ಹಿರೇಮಠ ವಕೀಲರಿಂದ

9. ಈ ದಿನ ನಾನು ನನ್ನ ತಂದೆಗೆ ಸಂಬಂದಿಸಿದ ಪಡಿತರ ಚೀಟಿಯನ್ನು ತಂದಿಲ್ಲ. ಈ ದಿನ ನಾನು ನನ್ನ ತಂದೆ ದಿವಂಗತ ಅಂಬರೀಶ ವರ್ಮಾ ರವರ ಜೊತೆ ತೆಗೆಸಿಕೊಂಡು ಫೋಟೊ ಗಳನ್ನು ತಂದಿಲ್ಲ ನಮ್ಮ ಮನೆಯವರು ಅವುಗಳನ್ನು ಹುಡುಕಾಡುತ್ತಿದ್ದಾರೆ. ಸದರಿ ಪಡಿತರ ಚೀಟಿ ಹಾಗೂ ಫೋಟೊ ಗಳನ್ನು ಒಂದು ತಿಂಗಳ ಕಾಲಾವಕಾಶ ನೀಡಿದರು ಸದರಿ ದಾಖಲೆಗಳು ನನ್ನ ಬಳಿ ಇಲ್ಲದಿದ್ದರಿಂದ ಅವುಗಳನ್ನು ತಂದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಬೆಂಗಳೂರಿನ ಸರ್ಜಾಪುರದಲ್ಲಿ ಜನಿಸಿರುತ್ತಾರೆ. ಸದರಿ ಸರ್ಜಾಪುರ ಅಂಬರೀಶ ವರ್ಮಾ ರವರ ಬೆಂಗಳೂರಿನ ಮನೆಯಿಂದ 8 ಕಿ ಮಿ ಅಂತರದಲ್ಲಿದೆ. ಅಂಬರೀಶ ವರ್ಮಾ ರವರ ಕುಟುಂಬಸ್ಥರು ನವುಗೆ ಸಂಬಂಧಿಕರು ಅಲ್ಲ ಎಂದರೆ ಸರಿ.

10. ನನ್ನ ತಂದೆಯ ತಂದೆ ವ್ಯವಸಾಯ ಮಾಡುತ್ತಿದ್ದರು. ಸದರಿಯವರು ಸಹ ಸರ್ಜಾಪುರದವರು. ಸರ್ಜಾಪುರದಲ್ಲಿ ನನ್ನ ಅಜ್ಜನ ಜಮೀನು ಇತ್ತು. ಸದರಿ ನನ್ನ ಅಜ್ಜನ ಜಮಿನು ನನ್ನ ತಂದೆಯ ಕಾಲಕ್ಕೆ ಇತ್ತೊ ಇಲ್ಲವೂ ನನಗೆ ಗೊತ್ತಿಲ್ಲ. ನನ್ನ ಅಜ್ಜ ತೀರಿಕೊಂಡಾಗ ನನ್ನ ತಂದೆಗೆ ಎಷ್ಟು ವಯಸ್ಸ ಇತ್ತು ಎಂದು ನನಗೆ ಗೂತ್ತಿಲ್ಲ. ಸದರಿ ನನ್ನ ಅಜ್ಜ ತೀರಿಕೊಂಡಾಗ ನನ್ನ ತಂದೆಗೆ ಎಷ್ಟು ವಯಸ್ಸು ಇತ್ತು ಎಂದು ನನ್ನ ತಂದೆ ನನಗೆ ಯಾವತ್ತು ಹೇಳಿರಲಿಲ್ಲ. ನನ್ನ ತಂದೆ ತನ್ನ ಉಪಜೀವನಕ್ಕೆ ಅಂಬರೀಶ ವರ್ಮಾ ರವರ ಆಸ್ತಿಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು ಹಾಗೂ ಅಂಬರೀಶ ವರ್ಮಾ ರವರು ಹೇಳಿದ ಕೆಲಸವನ್ನೆಲ್ಲಾ ಮಾಡುತ್ತಿದ್ದರು. ನನ್ನ ತಂದೆ ಅಂಬರೀಶ ವರ್ಮಾ ರವರೊಂದಿಗೆ ಯಾವ ರೀತಿ ಪರಿಚಯವಾದರು ಎಂದು ನನಗೆ ಗೊತ್ತಿಲ್ಲ. ಸದರಿ ಅಂಬರೀಶ ವರ್ಮಾ ರವರಿಗಾಗಲೀ ಅವರ ಕಟುಂಬದವರಿಗಾಗಲೀ ನನ್ನದಾಗಲೀ ಅಥವಾ ನನ್ನ ತಂದೆಯದಾಗಲಿ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ.

11. ಸದರಿ ಅಂಬರೀಶ ವರ್ಮಾ ರವರು ನನ್ನ ತಂದೆ ಅವರ ಸ್ವತ್ತುಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದಕ್ಕೆ ಸಂಬಂದಿಸಿದಂತೆ ಯಾವುದಾದರೂ ದಾಖಲೆಯನ್ನು

ಬರೆದುಕೊಟ್ಟಿದ್ದಾರೊ ಇಲ್ಲವೂ ನನಗೆ ಗೊತ್ತಿಲ್ಲ. ಸದರಿ ಈ ಪ್ರಕರಣದಲ್ಲಿ ಹಾಜರುಪಸಿಡಿದ ಮೃತ್ಯುಪತ್ರ ಬಿಟ್ಟು ನನಗೆ ನಮ್ಮ ಮನೆಯಲ್ಲಿನ ಪೆಟ್ಟಿಗೆಯಲ್ಲಿ ಬೇರೆ ಯಾವುದೇ ದಾಖಲೆ ಸಿಕ್ಕಿಲ್ಲ. ನನ್ನ ತಂದೆಗೆ ಸದರಿ ಅಂಬರೀಶ ವರ್ಮಾ ರವರು ಸದರಿಯವರ ಆಸ್ತಿಗಳನ್ನು ಉಸ್ತುವಾರಿ ಮಾಡುವ ಬಗ್ಗೆ ಯಾವುದೇ ದಾಖಲೆಯನ್ನು ಬರೆದುಕೊಟ್ಟಿರಲಿಲ್ಲ ಎಂಬ ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ನನ್ನ ತಂದೆ ತಾಯಿಯ ಮದುವೆಯನ್ನು ಸದರಿ ಅಂಬರೀಶ ವರ್ಮಾ ರವರೇ ಮಾಡಿಸಿದ್ದಾಗಿ ನಾನು ಹೇಳಿದ್ದು ಸದರಿ ಮದುವೆಯ ಸಂದರ್ಭದಲ್ಲಿನ ಅಂಬರೀಶ ವರ್ಮಾ ರವರು ನನ್ನ ತಂದೆ ತಾಯಿಯೋಂದಿಗೆ ತೆಗೆಸಿಕೊಂಡಿರುವ ಫೋಟೊ ಗಳು ಲಭ್ಯ ಇವೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಆ ಕಾಲದಲ್ಲಿ ಫೋಟೊ ಇರಲಿಲ್ಲ ಎನ್ನುತ್ತಾರೆ. ಸದರಿ ನನ್ನ ತಂದೆಯ ಮದುವೆಯ ಸಮಯದಲ್ಲಿ ಫೋಟೊ ತೆಗೆದಿಸಿದ್ದರೊ ಇಲ್ಲವೂ ನನಗೆ ಮಾಹಿತಿ ಇಲ್ಲ. ಸದರಿ ಅಂಬರೀಶ ವರ್ಮಾ ರವರ ಕುಟುಂಬಕ್ಕೆ ಸಂಬಂದಿಸಿದಂತೆ ನಮಗೆ ಎಷ್ಟು ಮಾಹಿತಿ ಇದೆ ಅಷ್ಟಕ್ಕೆ ಸಂಬಂದಿಸಿದಂತೆ ಮಾತ್ರ ಉತ್ತರಿಸುತ್ತೇನೆ. ಸದರಿ ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿದ ಮೃತ್ಯುಪತ್ರವನ್ನು ಬಿಟ್ಟು ಸದರಿ ಅಂಬರೀಶ ವರ್ಮಾ ರವರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

13. ಸದರಿ ಮೃತ್ಯು ಪತ್ರ ಶ್ರೀನಿವಾಸಪುರದಲ್ಲಿ ಇರುವ ನಮ್ಮ ಮನೆಯಲ್ಲಿನ ನನ್ನ ತಾಯಿಗೆ ಸಂಬಂದಿಸಿದ ಪೆಟ್ಟಿಗೆಯಲ್ಲಿ ಸಿಕ್ಕಿರುತ್ತದೆ. ಸದರಿ ಮೃತ್ಯು ಪತ್ರ ನನ್ನ ತಾಯಿಗೆ ಸಂಬಂದಿಸಿ ಪೆಟ್ಟಿಗೆಯಲ್ಲಿ ಸಿಕ್ಕಿರುತ್ತದೆ ಎಂದು ನಾನು ವಾದಪತ್ರದಲ್ಲಾಗಲೀ ಅಥವಾ ನನ್ನ ಸಾಕ್ಷ್ಯ ಪ್ರಮಾಣ ಪತ್ರ ದಲ್ಲಾಗಲೀ ಬರೆಸಿಲ್ಲ ಎಂದರೆ ಸರಿ. ನನ್ನ ತಾಯಿ 2022 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ಸದರಿ ಮೃತ್ಯು ಪತ್ರ ನನ್ನ ತಾಯಿಯ ಪೆಟ್ಟಿಗೆಯಲ್ಲಿ ಇದ್ದ ವಿಷಯ ನನ್ನ ತಾಯಿ ನನಗೆ ಹೇಳಿರಲಿಲ್ಲ. ಸದರಿ ಮೃತ್ಯು ಪತ್ರ ಸದರಿ ನನ್ನ ತಾಯಿಯ ಪೆಟ್ಟಿಗೆಯಿಂದ ಸಿಕ್ಕಿಲ್ಲ ಆದ್ದರಿಂದ ಆ ಬಗ್ಗೆ ನನ್ನ ತಾಯಿ ನನಗೆ ಹೇಳಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರ ನನ್ನ ತಾಯಿಯ ಪೆಟ್ಟಿಗೆಯಲ್ಲಿ ಸಿಕ್ಕಿರುತ್ತದೆ ಎಂದು ಈ ದಾವೆಗೆ ಅನುಕೂಲವಾಗಲಿ ಎಂದು ನಾನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2019 ರಲ್ಲಿ ನಾನು ಶ್ರೀನಿವಾಸಪುರದಲ್ಲಿರುವ ನಮ್ಮ ಮನೆಯನ್ನು ಸ್ವಚ್ಚಗೊಳಿಸಬೇಕಾದರೇ ಸದರಿ ಪೆಟ್ಟಿಗೆ ದೊರೆತಿತ್ತು ಆದರೇ ತಿಂಗಳು ಮತ್ತು ದಿನಾಂಕ ನನಗೆ ನೆನಪಿಲ್ಲ. ಆದರೇ ನಾನು ಸದರಿ ಪೆಟ್ಟಿಗೆ ಸಿಕ್ಕ ದಿನಾಂಕ ಮತ್ತು ತಿಂಗಳು ನಮ್ಮ ವಕೀಲರಿಗೆ ದಾವೇ ದಾಖಲಿಸುವ ಕಾಲಕ್ಕೆ ಮಾಹಿತಿ ನೀಡಿರುತ್ತೇನೆ. ನಾನು ನಮ್ಮ ವಕೀಲರಿಗೆ ಮಾಹಿತಿ ನೀಡುವ ಕಾಲಕ್ಕೆ ಯಾವ ತಿಂಗಳು ಎಂದು

ಹೇಳಿರುತ್ತೇನೆ ಎಂದು ಈಗ ನನಗೆ ನೆನಪಿಲ್ಲ. ನಾನು ನೀಡಿದ ಮಾಹಿತಿಯನ್ನು ನಮ್ಮ ವಕೀಲರು ಬರೆದುಕೊಂಡರೋ ಇಲ್ಲವೂ ನನಗೆ ಗೊತ್ತಾಗಲಿಲ್ಲ. ನಾನು ವಾದಪತ್ರದಲ್ಲಿ ನಮೂದಿಸಿರುವ ದಾವಾ ಕಾರಣ , ತಿಂಗಳು ಹಾಗೂ ದಿನವನ್ನು ಈ ದಾವೆ ದಾಖಲಿಸಲು ಸೃಷ್ಟಿಸಿಕೊಂಡಿರುವ ದಿನಾಂಕಗಳು ಎಂದರೆ ಸರಿಯಲ್ಲ. ಸದರಿ ಈ ದಾವೆಯನ್ನು ದಾಖಲಿಸಲು ನಾನು ನಮ್ಮ ವಕೀಲರಿಗೆ ಮಾಹಿತಿಯನ್ನು 2019 ರ ಮೇ ತಿಂಗಳಲ್ಲಿ ನೀಡಿರಬಹುದು. ಸಾಕ್ಷಿ ಮುಂದುವರೆದು ಮಾರ್ಚದಿಂದ ಮೇ ತಿಂಗಳುಗಳ ಮಧ್ಯ ನೀಡಿರಬಹುದು ಎನ್ನುತ್ತಾರೆ. ಸದರಿ ಈ ದಾವೆಗೆ ದಾವಾ ಕಾರಣದ ದಿನಾಂಕಗಳನ್ನು ನಾನು ಸೃಷ್ಟಿಸಿಕೊಂಡಿದ್ದರಿಂದ ಸದರಿ ದಿನಾಂಕಗಳು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ.

14. ನನ್ನ ತಂದೆ ಶ್ರೀನಿವಾಸಪುರದಲ್ಲಿ ತೀರಿಕೊಂಡಿರುತ್ತಾರೆ. ನಾನು ಈ ದಿನ ನನ್ನ ಶಾಲಾ ದಾಖಲಾತಿಯನ್ನಾಗಲೀ ಅಥವಾ ಜನ್ಮ ಪ್ರಮಾಣ ಪತ್ರವನ್ನಾಗಲೀ ನನ್ನ ಜನ್ಮ ದಿನಾಂಕವನ್ನು ತೋರಿಸಲು ಹಾಜರುಪಡಿಸಿಲ್ಲ. ನಾನು ದಿಃ 26.06.1963 ರಂದು ಜನಿಸಿರುತ್ತೇನೆ. ನನ್ನ ಪ್ರಮಾಣ ಪತ್ರ ದ ಸಂಗತಿಗಳನ್ನು ನಾನು ಓದಿ ಸಹಿ ಹಾಕಿರುತ್ತೇನೆ. ಸದರಿ ನನ್ನ ಪ್ರಮಾಣ ಪತ್ರ ದಲ್ಲಿ ಬರೇದ ಸಂಗತಿಗಳು ಸರಿಯಾಗಿವೆ ಇಲ್ಲವೂ ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರ ದಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿವೆ.

15. ನನ್ನ ಪ್ರಮಾಣ ಪತ್ರ ದಲ್ಲಿ ನನ್ನ ವಯಸ್ಸು 50 ಎಂದು ನಮೂದಿಸಲಾಗಿದ್ದು ಅದು ಸರಿಯಾಗಿದೆ. ನನಗೆ ಅಂಬರೀಶ ವರ್ಮಾ ರವರ ಕುಟುಂಬದವರ ಪರಿಚಯ ಇದೆ. ಅಂಬರೀಶ ವರ್ಮಾ ರವರ ತಂದೆಯ ಹೆಸರು ಬೀಮಪ್ಪ ದೇಸಾಯಿ ಎಂದು. ಸದರಿ ಬೀಮಪ್ಪ ದೇಸಾಯಿ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ಬೀಮಪ್ಪ ದೇಸಾಯಿ ವರಿಗೆ ಅಂಬರೀಶ ವರ್ಮಾ ರವರು ಒಬ್ಬನೇ ಮಗ ಎನ್ನುತ್ತಾರೆ. ಸದರಿ ಬೀಮಪ್ಪ ದೇಸಾಯಿ ರವರಿಗೆ ಅಂಬರೀಶ ವರ್ಮಾ ಬಿಟ್ಟು ಇನ್ನೊರ್ವ ಮಗ ಇದ್ದಾನೆ ಆತನ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ನನಗ ಗೊತ್ತಿಲ್ಲ. ಅಂಬರೀಶ ವರ್ಮಾ ರವರ ಹೆಂಡತಿಯ ಹೆಸರು ಸುಶೀಲಾ ಎಂದು. ಸುಶೀಲಾ ರವರಿಗೆ ಓರ್ವ ಮಗಳು ಅವರ ಹೆಸರು ಉಷಾ ಎಂದು. 3 ರಿಂದ 5 ನೇ ಪ್ರತಿವಾದಿಗಳು 2 ನೇ ಪ್ರತಿವಾದಿಯ ಮಕ್ಕಳು. ಅಂಬರೀಶ ವರ್ಮಾ ಹಾಗೂ ಸುಶೀಲಾ ರವರಿಗೆ ಒಬ್ಬಳೇ ಮಗಳು ಅವರು ಮೈತ್ರೆ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಯನ್ನು ಮಾತ್ರ ನೋಡಿದ್ದು 3 ರಿಂದ 5 ನೇ ಪ್ರತಿವಾದಿಯನ್ನು ನೋಡಿಲ್ಲ. 2 ನೇ ಪ್ರತಿವಾದಿಯ ಗಂಡನ ಹೆಸರು ರಾಮಚಂದ್ರ ಎಂದು. 2 ನೇ ಪ್ರತಿವಾದಿ ಜೀವಿತ ಇದ್ದಾರೆ. ಸದರಿಯವರೊಟ್ಟಿಗೆ ನಾನು ಈಗ ಒಡನಾಟ ಹೊಂದಿಲ್ಲ

**ಪಿ.ಡಬ್ಲೂ. 1**

1982 ಮುಂಚೆ ಒಡನಾಟ ಹೊಂದಿದೆ. 2 ನೇ ಪ್ರತಿವಾದಿಯ ಮನೆಗೆ ನಾನು ಈಗ ಹೋದರೇ ಸದರಿಯವರು ನನ್ನನ್ನು ಗುರುತಿಸುತ್ತಾರೆ ಇಲ್ಲವೂ ಗೊತ್ತಿಲ್ಲ ನಾನು ಅವರ ಮನೆಗೆ ಹೋಗುವುದಿಲ್ಲ. ನಾನು ಉಷಾ ರವರಿಗೆ ಪರಿಚಯ ಇಲ್ಲದಿದ್ದರಿಂದ ನಾನು ಅವರ ಮನೆಗೆ ಹೊಗುವುದಿಲ್ಲ ಎಂದರೆ ಸರಿಯಲ್ಲ. ಉಷಾ ಎಂಬುವವರು ಸುಶೀಲಾ ಬಾಯಿ ಅಂಬರೀಶ ವರ್ಮಾ ರವರರಿಗೆ ಮಗಳು ಇಲ್ಲದಿದ್ದರಿಂದ ನಾನು ಅವರ ಮನೆಗೆ ಹೊಗುವ ಪ್ರಶ್ನೆ ಉಬ್ದವಿಸುವುದಿಲ್ಲ ಎಂದರೆ ಸರಿಯಲ್ಲ.

16. 1 ನೇ ಪ್ರತಿವಾದಿ ಜೀವಿತರಾಗಿದ್ದಾರೆ ಅವರಿಗೆ 97-98 ವಯಸ್ಸ ಇರಬಹದು. ನಾನು ಇತ್ತಿಚೀಗೆ 1 ನೇ ಪ್ರತಿವಾದಿ ಮನೆಗೆ ಹೊಗಿಲ್ಲ. ನಾನು 1982 ರ ಮೊದಲು 1 ನೇ ಪ್ರತಿವಾದಿ ಮನೆಗೆ ಹೊಗಿದ್ದೆ ಆ ನಂತರ ಹೊಗಿಲ್ಲ. ನಾನು ಒಂದು ವೇಳೆ ಈಗ 1 ನೇ ಪ್ರತಿವಾದಿ ಮನೆಗೆ ಹೊದರೇ ಅವರು ನನ್ನನ್ನು ಗುರುತಿಸಿರುತ್ತಾರೆ. ನನಗೆ 1 ನೇ ಪ್ರತಿವಾದಿ ಯಾರು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಅಂಬರೀಶ ವರ್ಮಾ ರವರ ಮೂಲ ಊರು ಧಾರವಾಡ. ಅಂಬರೀಶ ವರ್ಮಾ ರವರ ಮೂಲ ಊರು ಯಾವುದು ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಅಂಬರೀಶ ವರ್ಮಾ ರವರು ಎಲ್ಲಿ ಜನಿಸಿದ್ದರು ಎಂದು ನನಗೆ ಗೊತ್ತಿಲ್ಲ. ಅಂಬರೀಶ ವರ್ಮಾ ರವರು ಎಷ್ಟು ವಿದ್ಯಾಬ್ಯಾಸ ಮಾಡಿರುತ್ತಾರೆ ಹಾಗೂ ಯಾವ ಶಾಲೆಯಲ್ಲಿ ವಿದ್ಯಾಬ್ಯಾಸ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ಅಂಬರೀಶ ವರ್ಮಾ ರವರ ಬಗ್ಗೆ ನನ್ನ ತಂದೆಗೆ ನಾನು ಯಾವುದೇ ಪ್ರಶ್ನೆಗಳನ್ನು ಕೇಳಿಲ್ಲ. ನನ್ನ ತಂದೆಗೆ ನಾನು ಅಂಬರೀಶ ವರ್ಮಾರವರ ಬಗ್ಗೆ ಯಾವುದೇ ಪ್ರಶ್ನೆಗಳನ್ನು ಕೇಳದೇ ಇದುದ್ದರಿಂದ ನನ್ನ ತಂದೆಗೆ ಅಂಬರೀಶ ವರ್ಮಾ ರವರ ಪರಿಚಯ ಇತ್ತೊ ಇಲ್ಲವೂ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಸದರಿ ಅಂಬರೀಶ ವರ್ಮಾ ರವರ ಮನೆಗೆ ನಾವು ಹೊಗುತ್ತಿದದರಿಂದ ನಮಗೆ ಗೊತ್ತು ಎನ್ನುತ್ತಾರೆ. ನನ್ನ ತಾಂದೆಯಾಗಲಿ ನಾನಾಗಲೀ ಅಂಬರೀಶ ವರ್ಮಾ ತಿರಿಕೊಂಡ ನತಂರ ಅವರ ಮನೆಗೆ ಹೊಗಿಲ್ಲ. ಅಂಬರೀಶ ವರ್ಮಾ ರವರು ತೀರಿಕೊಂಡ ನತಂರ ಅವರ ಅಂತ್ಯ ಸಂಸ್ಕಾರವನ್ನು ಯಾರು ನೆರವೇರಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿಯವರ ಅಂತ್ಯ ಸಂಸ್ಕಾರಕ್ಕೆ ನಾನು ಹೊಗಿರಲಿಲ್ಲ. ನಮಗೆ ಅಂಬರೀಶ ವರ್ಮಾ ರವರ ಕುಟುಂಬದವರಾಗಲೀ ಅಥವಾ 1 ನೇ ಪ್ರತಿವಾದಿ ಮತ್ತು 4 ನೇ ಪ್ರತಿವಾದಿ ಯವರಿಗೆ ನಮ್ಮ ಪರಿಚಯವಾಗಲಿ ಇಲ್ಲ ಎಂದರೆ ಸರಿಯಲ್ಲ.

17. ದಾವಾ ಸ್ವತ್ತಿನ ಸರ್ವೇ ನಂ.16/1. ಅದರ ಕ್ಷೇತ್ರ 1878 ಎಕರೆ ಇದೆ. ಅದು ದುರ್ಗದಕೆರೆ ಗ್ರಾಮದ ಹದ್ದಿನಲ್ಲಿ ಬರುತ್ತದೆ. ಸದರಿ ದುರ್ಗದಕೆರೆ ಗ್ರಾಮ ಧಾರವಾಡದಿಂದ

15 ಕಿ ಮಿ ಅಂತರದಲ್ಲಿ ಇರಬಹುದು. ಸದರಿ ದುರ್ಗದಕೆರೆ ಗ್ರಾಮದ ಸುತ್ತಮುತ್ತ ರಾಮಾಪೂರ ತೇಗೂರು ಗ್ರಾಮಗಳು ಬೇರೆ ಮತ್ತೆ ಯಾವ ಗ್ರಾಮಗಳು ಇವೆ ಎಂದು ನನಗೆ ಗೊತ್ತಿಲ್ಲ. ಸದರಿ ದುರ್ಗದಕೆರೆಗೆ ಗ್ರಾಮದ ಬೆಳಗಾವಿಗೆ ಹೊಗುವ ಹೆದ್ದಾರಿ ಪಕ್ಕದಲ್ಲಿ ಇದೆ. ನಾನು ಹಾಜರುಪಡಿಸಿದ ಮೃತ್ಯು ಪತ್ರದಲ್ಲಿ ಸರ್ವೇ ನಂ.16/1 ನ್ನು ತೊರಿಸಲಾಗಿದೆ. ನಾನು ಹಾಜರುಪಡಿಸಿದ ಮೃತ್ಯು ಪತ್ರದಲ್ಲಿ ನಮೂದಿಸಿದ ಸರ್ವೇ ನಂಬರ ಹಾಗೂ ದಾವಾ ಸ್ವತ್ತಿನ ಸರ್ವೇ ನಂಬರ ಬೇರೆ ಬೇರೆ ಎಂದರೆ ಸರಿಯಲ್ಲ. ಸರ್ವೇ ನಂ.16 ರಲ್ಲಿ ಈಗ ಎಷ್ಟು ಹಿಸ್ಸೆಗಳು ಆಗಿವೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ಸರ್ವೇ ನಂ.16 ಕ್ಕೆ ಸಂಬಂದಿಸಿದಂತೆ ಧಾರವಾಡದ ನ್ಯಾಯಾಲಯಗಳಲ್ಲಿ ಎಷ್ಟು ದಾವೆಗಳು ಚಾಲ್ತಿಯಲ್ಲಿವೆ ಎಂದು ನನಗೆ ಮಾಹಿತಿ ಇಲ್ಲ. ಸರ್ವೇ ನಂ.16 ಇದ್ದದ್ದು ಸರ್ವೇ ನಂ.16/1 ಯಾವಾಗ ಆಯಿತು ಎಂದು ನನಗೆ ಮಾಹಿತಿ ಇಲ್ಲ. ಸರ್ವೇ ನಂ.16 ಮೂಲತಃ 1878 ಎಕರೆ ಇತ್ತು. ಸರ್ವೇ ನಂ.16 ರ ಮೂಲ ಪಹಣಿ ಪತ್ರಿಕೆ ನಾನು ಹಾಜರುಪಡಿಸಿಲ್ಲ. ಸರ್ವೇ ನಂ.16/1 ಅಳ್ನಾವರ ಹೋಬಳಿಯಲ್ಲಿ ಬರುತ್ತದೆ. ನಿಪಿ.4 ರ ಋಣಗಳು ಕಾಲಂನಲ್ಲಿ ಏನನ್ನು ನಮೂದಿಸಲಾಗಿದೆ ಎಂದು ನನಗೆ ಮಾಹಿತಿ ಇಲ್ಲ. ಸರ್ವೇ ನಂ.16/1 ಜಮಿನನ್ನು ವೇಸ್ಟ ಕೊಸ್ಟ ಪೇಪರ ಮಿಲ್ಸ ಗೆ ಬೋಗ್ಯದ ಆಧಾರದ ಮೇಲೆ ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ.16/1 ಕ್ಕೆ ಸಂಬಂದಿಸಿದಂತೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ.4 ಆರ್ ಟಿ ಸಿ ಯ ಕಾಲಂ.11 ರಲ್ಲಿ ಸದರಿ ಜಮಿನಿಗೆ ಸಂಬಂದಿಸಿದಂತೆ ಎಷ್ಟು ಪ್ರಕರಣಗಳು ಚಾಲ್ತಿಯಲ್ಲಿವೆ ಎಂದು ನಮೂದಿಸಲಾಗಿದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ.

18. ನಾನು ನಿಪಿ.2 ಮೃತ್ಯು ಪತ್ರವನ್ನು 2019 ರಲ್ಲಿ ಮೊದಲ ಬಾರಿಗೆ ನೋಡಿರುತ್ತೇನೆ. ನಿಪಿ.2 ಮೃತ್ಯು ಪತ್ರ ಈ ದಾವೆ ದಾಖಲಿಸುವ ಮೊದಲು ಸುಸ್ಥಿತಿಯಲ್ಲಿ ಇತ್ತು ಈ ದಾವೆ ದಾಖಲಿಸಿದ ನಂತರ ಅದರ ಮೇಲೆ ನೀರು ಬಿದ್ದಿದ್ದರಿಂದ ಅಕ್ಷರಗಳು ಸರಿಯಾಗಿ ಕಾಣದ ಸ್ಥಿತಿಯಲ್ಲಿ ಇದೆ. ಸದರಿ ನನ್ನ ಪ್ರಮಾಣ ಪತ್ರ ಸಲ್ಲಿಸಿದ ನಂತರ ಸದರಿ ನಿಪಿ.2 ರ ಮೇಲೆ ನೀರು ಬಿದ್ದಿರುತ್ತದೆ. ಸದರಿ ನಿಪಿ.2 ರ ಮೇಲೆ ನೀರು ಬಿದ್ದು ಅದರ ಅಕ್ಷರಗಳು ಸರಿಯಾಗಿ ಕಾಣದಕ್ಕೆ ಸಂಬಂದಿಸಿದಂತೆ ನಾನು ಮುಂದುವರೆದ ಪ್ರಮಾಣ ಪತ್ರ ಸಲ್ಲಿಸಿ ಅದರಲ್ಲಿ ಆ ಬಗ್ಗೆ ಹೇಳಿಲ್ಲ. ನಿಪಿ.2 ಮೃತ್ಯು ಪತ್ರವನ್ನು ನಮ್ಮ ವಕೀಲರ ಮುಖಾಂತರ ಈ ದಾವೆಯಲ್ಲಿ ಹಾಜರುಪಡಿರುತ್ತೇನೆ. ಸದರಿ ನಿಪಿ.2 ಮೃತ್ಯು ಪತ್ರದಲ್ಲಿ ಅಕ್ಷರಗಳು ಸರಿಯಾಗಿ ಕಾರಣದೇ ಇದ್ದುರಿಂದ ಅದರ ಧೃಡಿಕೃತ ಪ್ರತಿಯನ್ನು ಉಪನೊಂದಣಾಧಿಕಾರಿ ಕಚೇರಿಯಿಂದ ತರಲು ನನಗೆ ನಮ್ಮ ವಕೀಲರು ಸೂಚಿಸಿಲ್ಲ. ನಿಪಿ.2 ರ ಧೃಡಿಕೃತ ನಕಲು ನ್ನು ತಂದು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

**ಪಿ.ಡಬ್ಲೂ. 1**

19. ನಿಪಿ.2 ಮೊದಲ ಬಾರಿಗೆ ನನಗೆ ದೊರೇತ ನಂತರ ನಾನು ಅದನ್ನು ನಮ್ಮ ಗ್ರಾಮದಲ್ಲಿ ಇರುವ ದಸ್ತು ಬರಹಗಾರನಾದ ರಜಾಕಸಾಬ ಎಂಬುವವರಿಗೆ ತೊರಿಸಿದ್ದೆ. ಸದರಿಯವರ ಪೂರ್ಣ ಹೆಸರು ನನಗೆ ಗೊತ್ತಿಲ್ಲ. ಸದರಿಯವರು ಮೃತ್ಯು ಪತ್ರವನ್ನು ಬರೆಯುವುದಿಲ್ಲ. ಸದರಿ ರಜಾಕಸಾಬ ನನಗೆ ಸದರಿ ದಾಖಲೆ ಮೃತ್ಯು ಪತ್ರ ಇದ್ದು ಆ ಬಗ್ಗೆ ಶಹಶಿಲ್ದಾರ ರವರಿಗೆ ಮಾತನಾಡಿ ಎಂದು ಹೇಳಿದ್ದರು. ನಿಪಿ.2 ನೈಜತೆಯನ್ನು ನಾನು ಶ್ರೀನಿವಾಸ ಪುರದ ಉಪನೊಂದಣಾಧಿಕಾರಿ ಕಚೇರಿಯಲ್ಲಿ ಪರಿಶೀಲಿಸಿಲ್ಲ. ನಿಪಿ.2 ರ ನೈಜತೆಯನ್ನು ಪರಿಶೀಲಿಸಲು ನಾನು ಈಗಲೂ ಪ್ರಯತ್ನಿಸಿಲ್ಲ ಎಂದರೆ ಸರಿ. ಆ ಬಗ್ಗೆ ನಮ್ಮ ವಕೀಲರು ಸಹ ನಮಗೆ ಸೂಚಿಸಿಲ್ಲ. ನಿಪಿ.2 ಮೃತ್ಯು ಪತ್ರವನ್ನು ಯಾರು ಬರೆದಿರುತ್ತಾರೆ ಎಂದು ನಹಾನು ತಿರಿದುಕೊಳ್ಳಲು ಪ್ರಯತ್ನಿಸಿಲ್ಲ. ಸದರಿ ನಿಪಿ.2 ರ ದಸ್ತು ಬಹರಗಾರ ಯಾರು ಎಂದು ಈಗಲೂ ಸಹ ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ನಿಪಿ.2 ಕ್ಕೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿರುತ್ತಾರೆ ಎಂದು ಸಹ ನನಗೆ ಈಗ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ತಿಳಿದುಕೊಳುತ್ತೇನೆ ಎನ್ನುತ್ತಾರೆ. ನಿಪಿ.2 ರ ದಸ್ತು ಬರಹಗಾರ ಯಾರು ಹಾಗೂ ಸಾಕ್ಷಿದಾರರಾಗಿ ಯಾರು ಸಹಿ ಮಾಡಿರುತ್ತಾರೆ ಎಂಬ ಮಾಹಿತಿ ನೀಡಿ ಎಂದು ನಮ್ಮ ವಕೀಲರು ನನಗೆ ಸೂಚಿಸಿಲ್ಲ.

20. ದಾವಾ ಸ್ವತ್ತು ಧಾರವಾಡ ಜಿಲ್ಲೆಯ ಹದ್ದಿನಲ್ಲಿ ಬರುತ್ತಿದ್ದರಿಂದ ಸದರಿ ಸ್ವತ್ತಿಗೆ ಸಂಬಂದಿಸಿದಂತೆ ಮೃತ್ಯು ಪತ್ರವನ್ನು ಶ್ರೀನಿವಾಸಪುರದ ಉಪನೊಂದಾಣಾಧಿಕಾರಿ ಕಚೇರಿಯಲ್ಲಿ ಯಾವ ಕಾರಣಕ್ಕಾಗಿ ನೊಂದಣಿ ಮಾಡಲಾಯಿತು ಎಂಬುದಕ್ಕೆ ಸಂಬಂದಿಸಿದಂತೆ ವಿವರಣೆಯನ್ನು ನಮ್ಮ ವಕೀಲರು ನನಗೆ ಕೇಳಿಲ್ಲ. ಸದರಿ ನಿಪಿ.2 ರ ನೈಜತೆಯನ್ನು ನಮ್ಮ ವಕೀಲರು ಸಹ ಪರಿಶೀಲಿಸಿಲ್ಲ. ನಿಪಿ.2 ಮೃತ್ಯು ಪತ್ರ ವನ್ನು ಶ್ರೀನಿವಾಸ ಪುರದ ಐಬಿ ಯಲ್ಲಿ ಬರೆಯಲಾಗಿದೆ ಎಂದು ನಿಪಿ.2 ರಲ್ಲಿಯೇ ನಮೂದಿಸಲಾಗಿದೆ ಅದನ್ನು ಓದಿಸಿ ತಿಳಿದುಕೊಂಡಾಗ ನನಗೆ ಆ ಬಗ್ಗೆ ಗೊತ್ತಾಗಿದೆ. ನಿಪಿ.2 ಮೃತ್ಯು ಪತ್ರ ಬರೆದುಕೊಟ್ಟ ಬಗ್ಗೆ ನನ್ನ ತಂದೆಗೆ ಮಾಹಿತಿ ಇತ್ತೂ ಇಲ್ಲವೂ ನನಗೆ ಗೊತ್ತಿಲ್ಲ. ಸದರಿ ಮೃತ್ಯು ಪತ್ರ ಇದ್ದ ಬಗ್ಗೆ ನನ್ನ ತಾಯಿಗೂ ಸಹ ಗೊತ್ತಿರಲಿಲ್ಲ. ಸಾಕ್ಷಿ ಮಂದುವರೆದು ನನ್ನ ತಂದೆ ಅಥವಾ ತಾಯಿಗೆ ಸದರಿ ಮೃತ್ಯು ಪತ್ರ ಇದ್ದ ಬಗ್ಗೆ ಮಾಹಿತಿ ಇತ್ತೊ ಇಲ್ಲವೂ ನನಗೇ ಮಾಹಿತ ಇಲ್ಲ ಎಂದು ನುಡಿಯುತ್ತಾರೆ. ನಿಪಿ.2 ಮೃತ್ಯು ಪತ್ರ ಸಿಕ್ಕ ನಂತರ ಸದರಿ ದಾಖಲೆ ನಮ್ಮ ಮನೆಯಲ್ಲಿ ಯಾವ ಬಂದಿರುತ್ತದೆ ಎಂದು ನಾನನು ನನ್ನ ತಾಯಿಯನ್ನು ಕೇಳಲಿಲ್ಲ. ನನ್ನ ತಂದೆ ತಾಯಿ ಬಿಟ್ಟು ನಮ್ಮ ಮನೆಯಲ್ಲಿ ಸದರಿ ಸಮಯದಲ್ಲಿ ಯಾರು ಹಿರಿಯರು ಇರಲಿಲ್ಲ. ಸದರಿ ಮೃತ್ಯು ಪತ್ರ ನಮ್ಮ ಮನೆಯ ಪೆಟ್ಟಿಗೆಯಲ್ಲಿ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ

ಆ ಬಗ್ಗೆ ನಮ್ಮ ಮನೆಯ ಇತರ ಸದಸ್ಯರಿಗೆ ಮಾಹಿತಿ ಇತ್ತೊ ಇಲ್ಲವೂ ನನಗೆ ಗೊತ್ತಿಲ್ಲ. ಸದರಿ ನಿಪಿ.2 ನಮ್ಮ ಮನೆಯ ಪೆಟ್ಟಿಗೆಯಲ್ಲಿ ದೊರೆತ ನಂತರ ನಾನು ನಮ್ಮ ತಂದೆ ತಾಯಿಗೆ ಸದರಿ ಮೃತ್ಯು ಪತ್ರ ಯಾವ ರೀತಿ ಬಂದಿರುತ್ತದೆ ಎಂದು ಕೇಳಲಿಲ್ಲ.

21. ಸದರಿ ಅಂಬರೀಶ ವರ್ಮಾ ರವರು ಶ್ರೀನಿವಾಸಪುರಕ್ಕೆ ಯಾವತ್ತೂ ಹೊಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಶ್ರೀನಿವಾಸ ಪುರದಲ್ಲರುವ ನಮ್ಮ ಮನೆಗೆ ಅಂಬರೀಶ ವರ್ಮಾ ಬರುತ್ತಿದ್ದರು ಎನ್ನುತ್ತಾರೆ. ಸದರಿ ಅಂಬರೀಶ ವರ್ಮಾ ರವರು ಶ್ರೀನಿವಾಸ ಪುರದ ನಮ್ಮ ಮನೆಗೆ ಬರುತ್ತಿದ್ದರು ಎಂದು ನಾನು ವಾದಪತ್ರದಲ್ಲಾಗಲೀ ಅಥವಾ ನನ್ನ ಸಾಕ್ಷ್ಯ ಪ್ರಮಾಣ ಪತ್ರ ದಾಲ್ಲಾಗಲೀ ಬರೆಸಿಲ್ಲ ಎಂದರೆ ಸರಿ. ಶ್ರೀನಿವಾಸಪುರದಲ್ಲಿ ಅಂಬರೀಶ ವರ್ಮಾ ರವರ ಸಂಬಂಧಿಕರು ಯಾರು ಇಲ್ಲ. ಸದರಿ ಅಂಬರೀಶ ವರ್ಮಾ ರವರ ಸಂಬಂದಿಕರು ಶ್ರೀನಿವಾಸ ಪುರದಲ್ಲಿ ಯಾರು ಇಲ್ಲದಿದ್ದರಿಂದ ಸದರಿಯವರು ಶ್ರೀನಿವಾಸ ಪುರಕ್ಕೆ ಹೋಗುವ ಪ್ರಶ್ನೆ ಉಬ್ದವಿಸುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ್ಯು ಪತ್ರ ಇರುವುದು ಬಿಟ್ಟು ಅದನ್ನು ಯಾರು ಯಾವ ಸಮಯದಲ್ಲಿ ಬರೆದರು ಎಂದು ನಾನು ದಸ್ತು ಬರಹಗಾರರಾನ್ನಾಗಲೀ ಅಥವಾ ನಿಪಿ.2 ರಲ್ಲಿ ನಮೂದಿಸಿದ ಸಾಕ್ಷಿದಾರರನ್ನಾಗಿ ಕೇಳಿಲ್ಲ ಎಂದರೆ ಸರಿ. ಸದರಿ ನಿಪಿ.2 ನೊಂದಣಿ ಕಾಲಕ್ಕೆ ಶ್ರಿನಿವಾಸ ಪುರದಲ್ಲಿ ಉಪನೋಂದಣಾಧಿಕಾರಿಯಾಗಿ ಯಾರು ಕಾರ್ಯ ನಿರ್ವಹಿಸುತ್ತಿದ್ದರು ಎಂದು ಸಹ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

22. ನಿಪಿ.2 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿರುವ ಮೊದಲನೇ ಸಾಲಿನ ಎಪ್ಪತ್ತೆದನೆಯ ಎಂಬ ಶಬ್ದವನ್ನು ಅಳಿಸಿ ಬರೆದಂತಾಗಿದೆ ಎಂದರೆ ಸರಿ. ಸದರಿ ನಿಪಿ.2 ರ ಮೊದಲನೇ ಪುಟದ ನಾಲ್ಕನೇ ಸಾಲಿನಲ್ಲಿ ವರ್ಮಾ ಎಂದು ಅಳಿಸಿ ಬರೆದಂತಾಗಿದೆ ಎಂದರೆ ಸರಿ. ಸದರಿ ಶಬ್ದಗಳನ್ನು ಅಳಿಸಿ ಬರೆದ ಬಗ್ಗೆ ಅಲ್ಲಿ ತಿದ್ದುಪಡಿಗೆ ಸಂಬಂದಿಸಿದ ದಸ್ತೂರು ಇಲ್ಲ ಎಂದರೆ ಸರಿ. ಸದರಿ ನಿಪಿ.2 ರ ಮೊದಲನೇ ಪುರದ ಕೊನೆಯಲ್ಲಿ 75 ಎಂದು ಬೇರೆ ಶಾಹಿಯಿಂದ ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ.2 ರ ಮೊದಲನೇ ಪುಟದಲ್ಲಿ ಅಂಬರೀಶ ವರ್ಮಾ ರವರ ಸಹಿ ಇಲ್ಲ. ನಿಪಿ.2 ರ ಮೊದಲನೇ ಪುಟದ ಕೊನೆಯಲ್ಲಿ 75 ಎಂದು ಬರೆದಿದ್ದು ಅದನ್ನು ಸಹ ಅಳಿಸಿ ಬರೆಯಲಾಗಿದೆ ಎಂದರೆ ಸರಿ. ನಿಪಿ.2 ರ 2 ನೇ ಪುಟದಲ್ಲಿ ಬರೆದ ಅಕ್ಷರಗಳು ಓದುವ ಸ್ಥಿತಿಯಲ್ಲಿ ಇಲ್ಲ ಎಂದರೆ ಸರಿ. ನಿಪಿ.2 ರ ಕೊನೆಯ ಪುಟದ ಎರಡು ಸಾಲುಗಳು ಹಾಗೂ ನಿಪಿ.2 ರ ಇತರ ಬರವಣಿಗೆ ಬೇರೆ ಬೇರೆ ಯಾಗಿದೆ ಎಂದರೆ ಸರಿ. ಸದರಿ ಬರವಣಿಗೆ ಬೇರೆ ಬೇರೆ ಇದ್ದ ಬಗ್ಗೆ ನಿಪಿ.2 ರ ಷರಾ ಇಲ್ಲ

ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಪಿ.2 ರಲ್ಲಿ ಆ ಬಗ್ಗೆ ಷರಾ ಇಲ್ಲ ಎಂದರೆ ಸರಿ. ನಿಪಿ.2 ರ ಎರಡನೇ ಪುಟದಲ್ಲಿ ಅಂಬರೀಶ ವರ್ಮಾ ರವರ ಸಹಿ ಇದೆಯೋ ಇಲ್ಲವೂ ಎಂದು ನನಗೆ ಗೊತ್ತಾಗುವುದಿಲ್ಲ. ಅದರ ಮೇಲೆ ನೀರು ಬಿದ್ದಿದೆ ಎನ್ನುತ್ತಾರೆ. ಸದರಿ ನಿಪಿ.2 ರ ಎರಡನೇ ಪುಟದಲ್ಲಿ ಸಹಿ ಇರುವ ಜಾಗಕ್ಕೆ ಜಾಸ್ತಿ ನೀರು ಬಿದ್ದಿದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಬರೆದ ಅಕ್ಷರಗಳು ಗೊತ್ತಾಗಬಾರದು ಎಂಬ ಉದ್ದೇಶದಿಂದ ನಾನು ಉದ್ದೆಶಪೂರ್ವಕವಾಗಿ ಸದರಿ ದಾಖಲೆಯ ಮೇಲೆ ನೀರು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.2 ದಾಖಲೆಯಲ್ಲಿ ಉಪನೊಂದಣಾಧಿಕಾರಿ ಕಚೇರಿಯವರು ಪುಟಗಳ ನಂಬರನ್ನು ನಮೂದಿಸಿಲ್ಲ ಎಂದರೆ ಸರಿ. ನಿಪಿ.2 ರ ಕೊನೆಯ ಪುಟದಲ್ಲಿ ನಮೂದಿಸಿದ 75 ರ 5 ಹಾಗೂ 74-75 ಮತ್ತು ಕೊನೆಯಲ್ಲಿ ನಮೂದಿಸಿದ ದಿನಾಂಕ ಅಳಕಿಸಿದೆ ಎಂದರೆ ಸರಿ. ರೋಮನ್ ಅಂಕಿ ಸಂಖ್ಯೆ ನನಗೆ ಗೊತ್ತಾಗುವುದಿಲ್ಲ. ನಿಪಿ.2 ರ ಮೊದಲನೇ ಪುಟದಲ್ಲಿ ಕೊನೆಗೆ ರೋಮನ್-III ಎಂದು ಬರೆಯಲಾಗಿದೆ ಎಂದರೆ ಸರಿ. ಅದೇ ರೀತಿ ನಿಪಿ.2 ಎರಡನೇ ಪುಟದಲ್ಲಿ ಕೊನೆಯಲ್ಲಿ ರೋಮನ್ IV ಎಂದು ಬರೇಯಲಾಗಿದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಉಪನೊಂದಣಾಧಿಕಾರಿ ಕಚೇರಿ ಯಲ್ಲಿ ಮೃತ್ಯು ಪತ್ರಗಳನ್ನು ಪುಸ್ತಕ ನಂ.3 ರಲ್ಲಿ ನಮೂದಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.2 ರಲ್ಲಿ ನಮೂದಿಸಿದ ರೌಂಡ ಸೀಲು ಉಪನೊಂದಣಾಧಿಕಾರಿ ಕಚೇರಿ ಯ ಸೀಲು ಅಲ್ಲ ಎಂದರೆ ಸರಿಯಲ್ಲ.

23. ಡಿಜಿಟಲ್ ವ್ಯವಸ್ಥೆಯಲ್ಲಿ ಓರ್ವ ವ್ಯಕ್ತಿಯ ಸಹಿ ದೊರೆತರೇ ಅದನ್ನು ನಕಲು ಮಾಡಿ ಬೇರೆ ದಾಖಲೆಯ ಮೇಲೆ ಅದನ್ನು ಮುದ್ರಿಸಬಹುದು ಎಂದರೆ ನನಗೆ ಗೊತ್ತಿಲ್ಲ. ನಿಪಿ.2 ರಲ್ಲಿ ಕೊನೆಯ ಪುಟದಲ್ಲಿ ಮಾಡಿದ ಉಪನೊಂದಣಾಧಿಕಾರಿಯ ಎರಡು ಸಹಿಗಳು ಬೇರೇ ಬೇರೆಯಾಗಿವೆ ಎಂದರೆ ಸರಿಯಲ್ಲ. ನಿಪಿ.2 ಮೃತ್ಯು ಪತ್ರ ವನ್ನು ನಾನು ಸೃಷ್ಟಿಸಿಕೊಂಡಿರುತ್ತೇನೇ ಎಂದರೆ ಸರಿಯಲ್ಲ. ಸದರಿ ನಿಪಿ.2 ಮೃತ್ಯು ಪತ್ರ ಬರೆಯುವ ಸಮಯದಲ್ಲಿ ಯಾರೆಲ್ಲಾ ಹಾಜರಿದ್ದರು ಎಂದು ನಾನು ಈವರೆಗೂ ಸಹ ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ.

24. ನಿಪಿ.2 ರಲ್ಲಿ ಸರ್ವೇ ನಂ.16 ಎಂದು ನಮೂದಿಸಿದ್ದು 16/1 ಎಂದು ನಮೂದಿಸಿಲ್ಲ ಎಂದರೆ ಸರಿ. 1974 ರ ಸರ್ವೇ ನಂ.16 ರ ಆರ್ ಟಿ ಸಿ ಯನ್ನು ಹಾಜರುಪಡಿಸಿರುತ್ತೇನೆ. ಮತ್ತೆ ಹಾಜರುಪಡಿಸುವೆ. ಸದರಿ ಸರ್ವೇ ನಂ.16 ರ 1974 ರ ಆರ್ ಟಿ ಸಿ ಯನ್ನು ನಾನು ಹಾಜರುಪಡಿಸದೇ ಇದ್ದರೂ ಸಹ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.16 ಮೂಲತಃ 1935 ಎಕರೆ

**ಪಿ.ಡಬ್ಲ್ಯೂ. 1**

20 ಗುಂಟೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಪಿ.2 ಬರೆಯಲಾಗಿದೆ ಎಂದು ಹೇಳುವ ಕಾಲಕ್ಕೆ ಸದರಿ ಸರ್ವೇ ನಂ.16 ಕ್ಷೇತ್ರ 1878 ಎಕರೆ ಇರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ದಾಖಲೆಗಳನ್ನು ಪರಿಗಣಿಸದೇ ನಿಪಿ.2 ನ್ನು ಸೃಷ್ಟಿಸಿ ಅದಕ್ಕೆ ಸಂಬಂದಿಸಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. ದಾವಾ ಜಮಿನನ್ನು ಬಿಟ್ಟು ಅಂಬರೀಶ ವರ್ಮಾ ರವರ ಬೇರೆ ಯಾವೆಲ್ಲಾ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದೆವು ಅವುಗಳ ಸರ್ವೇ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿ ಅಂಬರೀಶ ವರ್ಮಾ ರವರಿಗೆ ಎಷ್ಟು ಜಮಿನುಗಳು , ಮನೆಗಳು ಹಾಗೂ ವಾಡೆಗಳು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಅಂಬರೀಶ ವರ್ಮಾ ರವರು ಅವರ ಜಮಿನುಗಳ ಉಸ್ತವಾರಿಯನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದ ಬಗ್ಗೆ ಸದರಿಯವರು ನನ್ನ ತಂದೆಯ ಹೆಸರಿಗೆ ಯಾವುದಾದರೂ ದಾಖಲೆ ಬರೆದುಕೊಟ್ಟಿದ್ದಾರೊ ಇಲ್ಲವೂ ನನಗೆ ಗೊತ್ತಿಲ್ಲ. ಸದರಿ ಅಂಬರೀಶ ವರ್ಮಾ ರವರ ಜಮಿನುಗಳಿಗೆ ಸಂಬಂದಿಸಿದ ಕಂದಾಯ ಪಾವತಿ ರಶೀದಿಗಳು ಹಾಗೂ ಇತರ ಯಾವುದೇ ಅರ್ಜಿಯಾಗಲೀ ನನ್ನ ಬಳಿ ಇಲ್ಲ. ಸದರಿ ದಾಖಲೆಗಳು ನನ್ನ ತಂದೆಯ ಬಳಿ ಇದ್ದವೂ ಇಲ್ಲವೂ ನನಗೆ ಗೊತ್ತಿಲ್ಲ. ಈ ದಾವೆ ದಾಖಲಿಸುವ ಮುನ್ನ ನಾನು 1 ನೇ ಪ್ರತಿವಾದಿಯನ್ನು ಬೇಟಿಯಾಗಿದ್ದರಿಂದ ಸದರಿಯವರಿಗೆ ನಿಪಿ.2 ಮೃತ್ಯು ಪತ್ರ ಇರುವ ವಿಚಾರ ಗೊತ್ತಿದೆ ಎಂದು ನನಗೆ ಖಾತರಿಯಾಗಿತ್ತು. ಹಾಗೂ ಆ ಬಗ್ಗೆ ನನಗೆ 1 ನೇ ಪ್ರತಿವಾದಿಯೇ ಸದರಿ ಸಮಯದಲ್ಲಿ ಹೇಳಿದ್ದರು. ನಾನು 1 ನೇೀ ಪ್ರತಿವಾದಿಯನ್ನು 2019 ನೇ ಸಾಲಿನ ರವಿವಾರದ ದಿನ ಬೇರಯಾಗಿದ್ದೆ ತಿಂಗಳು ಹಾಗೂ ದಿನಿನಾಂಕ ನಿಖರವಗಿ ಹೇಳಲು ಬರುವುದಿಲ್ಲ. ಸರಿದ ಸಮಯದಲ್ಲಿ ನಾನು ಅವರೊಟ್ಟಿಗೆ ಫೋಟೊ ವನ್ನು ತೆಗೆಸಿಕೊಳ್ಳಲಿಲ್ಲ. ಹಾಗೂ ಸದರಿ ಸಮಯದಲ್ಲಿ 1 ನೇ ಪ್ರತಿವಾದಿಯಿಂದ ಲಿಖಿತವಾಗಿ ಯಾವುದೇ ದಾಖಲೆಯನ್ನು ನಾನು ನಿಪಿ.2 ಕ್ಕೆ ಸಂಬಂದಿಸಿದಂತೆ ಬರೆದುಕೊಳ್ಳಲಿಲ್ಲ. ಸದರಿ ಈ ದಾವೆ ದಾಖಲಿಸುವ ಮುನ್ನ ನಾನು 1 ನೇ ಪ್ರತಿವಾದಿಗೆ ಬೇಟಿಯಾದ ವಿಚಾರ ನನ್ನ ಪ್ರಮಾಣ ಪತ್ರ ದಲ್ಲಾಗಲೀ ಅಥವಾ ನನ್ನ ವಾದಪತ್ರದಲ್ಲಾಗಲೀ ಬರೆದಿಲ್ಲ. ನಾನು ದಾವೆ ದಾಖಿಸುವ ಮ್ನು ನಾನು 1 ನೇ ಪ್ರತಿವಾದಿಯನ್ನು ಬೇಟಿಯಾಗಿದ್ದೆ ಎಂದು ಈಗ ನಾನು ಸೃಷ್ಟಿಸಿಕೊಂಡು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ನಿಪಿ.2 ಮೃತ್ಯು ಪತ್ರದ ಅನ್ವಯ ನನ್ನ ಹೆಸರನ್ನು ಸರ್ವೇ ನಂ.16/1 ಆರ್ ಟಿ ಸಿ ದಾಖಲಿಸಲು ತಹಶಿಲ್ದಾರ ರವರಿಗೆ ಅರ್ಜಿ ನೀಡಿದ್ದು ಅವರು ಪುರಸ್ಕರಿಸದಿದ್ದರಿಂದ ನಾನು ಈ ದಾವೆಯನ್ನು ದಾಖಲಿಸರುತ್ತೇನೆ. ಸದರಿ ತಹಶಿಲ್ದಾರ ರವರು ದಾವೆ ದಾಖಲಿಸುವಂತೆ ನನಗೆ ಷರಾ ಬರೆದುಕೊಟ್ಟಿಲ್ಲ. ನಿಪಿ.2 ಕ್ಕೆ ಸಂಬಂದಿಸಿದಂತೆ ನಾನು ಪ್ರೊಬೆಟ್ ಪೆಡದಿಲ್ಲ.

25. ಸದರಿ ದುರ್ಗದಕೆರೆ ಗ್ರಾಮದಲ್ಲಿ ನನಗೆ ಎನ್ ಎಸ ಪಾಟೀಲ ಹಾಗೂ ಹುದ್ದಾರ ಎಂಬುವವರು ಪರಿಚಯಸ್ಥರು ಇದ್ದರು ಸದರಿಯವರನ್ನು ಬಿಟ್ಟು ಬೇರೆ ಯಾರು ಸದರಿ ಗ್ರಾಮದಲ್ಲಿ ಪರಿಚಯಸ್ಥರು ಇಲ್ಲ. ಸದರಿಯವರು ಈಗ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಅಂಬರೀಶ ವರ್ಮಾ ರವರ ಆಸ್ತಿಗಳ ಉಸ್ತವಾರಿಯನ್ನು ಈಗ ಯಾರು ನೊಡಿಕೊಳ್ಳುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ನಾನು ಉಸ್ತುವಾರಿ ಮಾಡುತ್ತಾನೆ ಎಂದು ತೋರಿಸಲು ನಿಪಿ.2 ಮೃತ್ಯು ಪತ್ರ ಬಿಟ್ಟು ಬೇರ ಯಾವುದೇ ದಾಖಲೆ ನನ್ನ ಬಳಿ ಇಲ್ಲ. ಸದರಿ ದಾವಾ ಸ್ವತ್ತುನ್ನು ಉಸ್ತುವಾರಿ ಮಾಡಲು ನಾನು ಧಾರವಾಡದಲ್ಲಿ ಮನೆ ಹೊಂದಿದ್ದೆ. ಸದರಿ ಮನೆ ಬಾಡಿಗೆಯಿಂದ ಪಡೆಯಲಾಗಿತ್ತು. ಸದರಿ ಮನೆ ಓಲ್ಡ ಎಸ್ ಪಿ ಕಚೇರಿಯ ಹಿಂಭಾಗ ಇರುವ ಜನತಾ ಕಲೋನಿಯಲ್ಲಿ ಇತ್ತು. ಸದರಿ ಕಚೇರಿಯ ಹಿಂಭಾಗ ಯಾವುದೇ ಜನತಾ ಕಾಲೋನಿ ಇಲ್ಲ ಎಂದರೆ ಸರಿಯಲ್ಲ. ಸದರಿ ಮನೆಯ ಮಾಲೀಕನ ಹೆಸರು ಬಟನವಾಲಾ ಎಂದು ಇದ್ದು ಆತನ ಪೂರ್ತಿ ಹೆಸರು ನನಗೆ ಗೊತ್ತಿಲ್ಲ. ಸದರಿ ಮನೆಯಲ್ಲಿ ನಾವು 15-20 ವರ್ಷಗಳವೆರೆಗ ಇದ್ದೆವು. ಸದರಿ ಮನೆಯಲ್ಲಿ ಬಾಡಿಗೆ ಇದ್ದ ಬಗ್ಗೆ ಬಾಡಿಗೆ ಪತ್ರವಾಗಲೀ ಅಥವಾ ಇತರ ದಾಖಲೆಯಾಗಲಿ ಈ ದಾವೆಯಲ್ಲಿ ಹಾಜುರಪಒಸಿಡಿಲ್ಲ. ಸದರಿ ಮನೆಯಲ್ಲಿ ನಾನು 15-20 ವರ್ಷ ವಾಸವಾಗಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದರಿ ಸಮಯದಲ್ಲಿ ನಾನು ಚಿಕ್ಕವನಿದ್ದರಿಂದ ಸದರಿ ಮನೆಯ ಅಕ್ಕ ಪಕ್ಕ ಯಾರಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಮನೆಯನ್ನು ನನ್ನ ತಂದೆ ಬಾಡಿಗೆಯಿಂದ ಪಡೆದಿದ್ದರು. ಸದರಿ ಮನೆಯಲ್ಲಿ 1982 ರ ಮುಂಚೆ ನಾವು ಬಾಡಿಗೆಯಿಂದ ಇದ್ದೆವು. 1982 ರ ನಂತರ ನಾವು ಧಾರವಾಡದಲ್ಲಿ ಬಾಡಿಗೆ ಮನೆಯಲ್ಲಾಗಲೀ ಅಥವಾ ಬೇರೆ ರೀತಿಯಲ್ಲಾಗಲೀ ವಾಸವಿಲ್ಲ. ಸದರಿ ಮನೆ ಮಾಲೀಕ ಬಟನವಾಲಾ ಈಗ ಇದ್ದಾರೊ ಇಲ್ಲವೂ ನನಗೆ ಗೊತ್ತಿಲ್ಲ.

26. ನಿಪಿ.2 ರಲ್ಲಿ ನಾನು ಸೃಷ್ಟಿಸಿ ಬರೆದ ಸಂಗತಿಗಳನ್ನು ಬಿಟ್ಟು ನನಗೆ ಅಂಬರೀಶ ವರ್ಮಾ ರವರ ಕುಟುಂಬದ ಬಗ್ಗೆಯಾಗಲಿ ಅವರ ಆಸ್ತಿಗಳ ಬಗ್ಗೆಯಾಗಲಿ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಅಂಬರೀಶ ವರ್ಮಾ ರವರು ಪರಿಚಯಸ್ಥರು ಹಾಗೂ ಆತ್ಮಿಯರಾಗಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಬರೀಶ ವರ್ಮಾ ರವರಿಗೆ ಧಾರವಾಡ ಜಿಲ್ಲೆಯಲ್ಲಿ ಇರುವ ಜಮಿನು ಬಿಟ್ಟು ಅವರಿಗೆ ಬೈಲಹೊಂಗಲ , ದೇವನಹಳ್ಳಿ , ಯರಗಟ್ಟಿ ಯಲ್ಲಿ ಜಮಿನುಗಳು ಇವೆ. 1878 ಎಕರೆ ಜಮಿನು ದೊಡ್ಡ ಆಸ್ತಿ ಎಂದರೆ ಸರಿ. ಸದರಿ ದಾವಾ ಸ್ವತ್ತನ್ನು 1 ನೇ ಪ್ರತಿವಾದಿ ಯಿಂದ ಬರೆಸಿಕೊಳ್ಳಬೇಕು ಎಂದು ನನಗೆ ಅನ್ನಿಸಲಿಲ್ಲ. ನನ್ನ ಪ್ರಮಾಣ ಪತ್ರ ದಲ್ಲಿ ನಮೂದಿಸಿದ ನನ್ನ

**ಪಿ.ಡಬ್ಲೂ. 1**

ವಯಸ್ಸನ್ನು ಗಣನೆಗೆ ತೆಗೆದುಕೊಂಡರೆ ನಾನು ಜನಿಸಿದ ವರ್ಷ 1973-74 ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತಿರಿಕೊಂಡಾಗ ಅವರಿಗೆ 80 ವರ್ಷ ಆಗಿರಬಹುದು. ನಿಪಿ.2 ರಲ್ಲಿ ನಮೂದಿಸಿದ ಮುನಿಸ್ವಾಮಿ ರವರಿಗೆ 72 ವಯಸ್ಸು ಎಂದು ಬರೆಯಲಾಗಿದೆ ಎಂದರೆ ಸರಿ. ನನ್ನ ತಂದೆ ತಿರಿಕೊಳ್ಳುವ ಸಮಯದಲ್ಲಿ ಅವರಿಗೆ ವಯಸ್ಸು 80 ರ ಮೆಲ್ಪಟ್ಟು ಆಗಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ರಲ್ಲಿ ನಾರಾಯಣಸ್ವಾಮಿ ಅಂದರೇ ನನ್ನ ವಯಸ್ಸು 22 ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ತಪ್ಪಾಗಿ ಬರೆದಿರಬಹುದು ಎನ್ನುತ್ತಾರೆ. ನಿಪಿ.2 ರಲ್ಲಿ ಬರೆದಿರುವ ಸಂಗತಿಗಳು ಸುಳ್ಳಿನಿಂದ ಕೂಡಿದ್ದು ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಿಪಿ.2 ನ್ನು ಸೃಷ್ಟಿಸಿಕೊಂಡು ಅದಕ್ಕೆ ಪೂರಕವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೋಲ್ ಜಯಕುಮಾರ ಹಿರಿಕುಡೆ.)**
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.